73

ಮೈಸೂರ ಗೆಜೆಟ.

ಸಂ. XXXI. ಸರ್ಕಾರದಿಂದ ಘೋಷಣೆ ಆದ್ದು. [ನಂ. 33.

ಬೆಂಗಳೂರು, ಗುರುವಾರ, ಆಗಸ್ಟ್ ತಾ॥ 20, ಸನ್ 1896.

ಹೊಸ ಪತ್ರಿಕೆ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಜೇಲ್ ಜಡ್ಜ್‌ಗಳು ಮತ್ತೆ ರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನ ಪತ್ರಿಕೆ.

ಮೈಸೂರು ಬೇಕೇ ಪರೀಕ್ಷೆಗಳು.

ಸನ್ 1896ನೇ ಇಸವಿ ಆಗಸ್ಟ್ ತಾರೀಖು 6.

(i) ಸನ್ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಲೋವರ್ ಸೆಕಂಡರಿ ಪರೀಕ್ಷಾ ದೇಶಭಾಷಾ ಪರೀಕ್ಷೆಗಳಿಗೆ ಪ್ರವೇಶಧನವು (2—8—0) ರೂಪಾಯಿಗಳಿಗೆ ಬದಲಾಗಿ (3—0—0) ರೂಪಾಯಿಗಳಂತೆ ನಿಯಮಿಸಲ್ಪಟ್ಟಿರುತ್ತೆ.

(ii) ಸನ್ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಕರ್ಣಾಟಕ ಪಂಡಿತ ಪರೀಕ್ಷೆಗೆ ಕರ್ಣಾಟಕ ವಚನಕಾವ್ಯವು ಪೂರ್ತಿಯಾಗಿ ನಿಯಮಿಸಲ್ಪಟ್ಟಿರುತ್ತೆ.

ಎಚ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಬೆಂಗಳೂರ್ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 24ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಪ್ಯೂನರ್ ಫಾರೆಸ್ಟ್ ಯಾನೆ ಚಿಲ್ಲರೆ ಪಸಾರೆ ಮತ್ತು ಮರವಳ್ಳಿ ಫಸಲಿನ ಹರಾಜು ವಿಷಯದಲ್ಲಿ ನಾದಕ್ಕಾಡಲ್ಪಟ್ಟಿರುವ 1895ನೇ ಇಸವಿ ಜನವರಿ 31ನೇ ಮಕ್ಕಂ ಮೈಸೂರ್ ಗೆಜೆಟ್ಟಿನ 2ನೇ ಭಾಗದಲ್ಲಿ ಘೋಷಿತವಾಗಿರುವ ಆದೇ ಇಸವಿ ಜನವರಿ 23ನೇ ದಿನಕ್ಕಂ ಇಸ್ತಿಹಾರನ್ನು ಬದಲಾಯಿಸಿ ಅಮಲ್‌ದಾರ್ ಮತ್ತು ಸರ್ವಾಲ್‌ದಾರ್‌ಗಳ ನಡವಳಿಕೆ ಬಗ್ಗೆ ಈ ಕೆಳಗೆ ನಮೂದುಗುವ ತಾಜಾ ಇಸ್ತಿಹಾರ್ ಪ್ರಕಟಿಸಲ್ಪಟ್ಟಿರುತ್ತೆ.

(1) ಕಾರ್ತೀಕ ಮತ್ತು ವೈಶಾಖಿ ಫಸಲ್‌ಗಳು ಬೇರೆ ಬೇರೆ ಯರಡು ಕಾಲಗಳಲ್ಲಿ ಹರಾಜು ಮಾಡಲ್ಪಡುತ್ತವೆ.

(2) ತಾಲ್ಲೂಕು ಅಮಲ್ದಾರ್ರೇ ಆಗಲಿ ಅವರ ಗೈರಹಾಜರಿಯಲ್ಲಿ ಶಿರಸ್ತಾರ್ರೇ ಆಗಲಿ ಈ ಬಗ್ಗೆ ಡೆಪ್ಯೂಟಿ ಕಮ್ಮಿಷನರವರಿಂದ ಗೊತ್ತುಮಾಡುವ ಸ್ಥಳಗಳಲ್ಲಿ ಫಸಲನ್ನು ಹರಾಜು ಮಾಡುವರು. ಕಾರ್ತೀಕ ಫಸಲನ್ನು ಡಿಸೆಂಬರ ತಿಂಗಳಲ್ಲಿಯೂ ವೈಶಾಖೀ ಫಸಲನ್ನು ಮೇ ತಿಂಗಳಲ್ಲಿಯೂ ಅನುಕೂಲವಾದ ತಾರೀಖುಗಳಲ್ಲಿ ಹರಾಜು ಮಾಡಲಾಗುವದು. ಆ ತಾರೀಖುಗಳನ್ನು ಅಮಲ್ದಾರು ಪ್ರಕಟಿಸುತ್ತಾರೆ. ಇನ್ನೊಂದು ಹುಕುಂ ಕೊಡುವವರಿಗೂ ಕ್ಲೋಸ್‌ಪೇಟೆ ಸಬ್ ಡಿವಿಜನಿನಲ್ಲಿ ಈ ಕೆಳಗೆ ನಮೂದುಮಾಡಿರುವ ಸ್ಥಳಗಳಲ್ಲಿ ಹರಾಜ್ ಮಾಡಲ್ಪಡುತ್ತೆ.

(3) ಹರಾಜು ಷರತ್ತುಗಳೇನಂದರೆ:—

(a) ಹರಾಜು ಪೂರೈಸಿದನಂತರ ಬರುವ ದರಖಾಸ್ತುಗಳನ್ನು ಮಂಜೂರ್ಮಾಡುವದಿಲ್ಲ.

(b) ಆಖೈರ್ ಜಡಸವಾಲ್ ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರಾಗುವ ವರಿಗೂ ಕಾಯಂ ಆದದ್ದಾಗಿ ತಿಳಿಯು ಕೂಡದು.

(c) ಹರಾಜು ಕಾಲದಲ್ಲಿ ಸವಾಲ್ ಮಾಡುವರು ತಮ್ಮೆ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರ ಪಜಾ ಟರಾಗಿ ಸವಾಲ್ ಮಾಡುತ್ತಾರೋ ಕೇಳಿಲ್ಪಡುವುದು. ಆ ಸಂದರ್ಭದಲ್ಲಿ ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ರುಜು ಹಾಕಲ್ಪಟ್ಟ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು, ಹಾಗಿಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡಬಹುದು.

(d) ಜಡಸವಾಲ್ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಕೇಳಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ಟನ್ನು ಹಾಜರ್ಮಾಡಬೇಕು. ಬಾಕಿ ಮೊಬಲಗನ್ನೂ ಮತ್ತು ರೂಪಾಯಿ 1ಕ್ಕೆ ಬಂದಾಣಿ ಮೇರಿಗೆ ಆಗುವ ಲೋಕಲ್ ಸೆಸ್ಸ್‌ನ್ನೂ ಸಹ ಹರಾಜ್ ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್ದಾರ್ರಿಂದ ತಿಳಿಸಲ್ಪಟ್ಟ 7 ದಿನಗಳೊಳಗಾಗಿ ಪಾವತಿ ಮಾಡಬೇಕು. ಡಿಪಾಜಿಟ್ಟನ್ನು ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಕ್ರಮವಾಗಿ ಪಾವತಿ ಮಾಡುವದಕ್ಕೂ ತಪ್ಪಿದರೆ ಕೂಡ್ಲೆ ಪುನಹ ಹರಾಜ್ ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲು ಸವಾಲ್ದಾರನನ್ನು ಗುರಿಮಾಡುವದು.

(e) ಅಂಗೀಕರಿಸಲ್ಪಟ್ಟ ಸವಾಲ್ದಾರನು ವೈಶಾಖೀ ಫಸಲನ್ನು ಜೂನ್ 1ನೇ ತಾರೀಖು ಲಾಗಾಯತು ಡಿಸೆಂಬರು 31ರ ವರಿಗೂ, ಕಾರ್ತೀಕ ಫಸಲನ್ನು ಜನವರಿ 1ನೇ ತಾರೀಖು ಲಾಗಾಯತು ಮೇ 31ರ ವರಿಗೂ ರೂಢಿಸಿಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ.

ತಾಲ್ಲೂಕು.		ತಾಲ್ಲೂಕಿನಲ್ಲಿ ಹರಾಜ್ ಮಾಡುವ ಸ್ಥಳ.
ಚನ್ನಪಟ್ಟಣ	..	ಪ್ರತಿ ಹೋಬಳಿ ಕಸಬೆಯಲ್ಲಿಯೂ ಆಯಾ ಹೋಬಳಿ ಬಾಬತು ಮರವಳಿ (ಜಂಗಲಿ ಪಸಾರೆ ಚನ್ನಪಟ್ಟಣದ ಕಸಬೆಯಲ್ಲಿ ಮಾತ್ರ) ಹರಾಜ್‌ಮಾಡಲ್ಪಡುತ್ತೆ)
ಕಾರ್ಕಾನಹಳ್ಳಿ	..	ಪ್ರತಿ ಹೋಬಳಿ ಕಸಬೆಯಲ್ಲಿಯೂ ಆಯಾ ಹೋಬಳಿ ಬಾಬತು (ಮರಳಿ ಮತ್ತು ಜಂಗ್ಲಿ ಪಸಾರೆ ಸಹ)
ಮಾಗಡಿ	..	ಮಾಗಡಿ ತಾವರೆಕೆರೆ, ಸೋಲೂರು, ಕುದೂರು ಮೊಕ್ಕಾಂಗಳಲ್ಲಿ (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)
ಕ್ಲೋಸ್‌ಪೇಟೆ	..	ಬಿಡದಿ ಮತ್ತು ಕ್ಲೋಸ್‌ಪೇಟೆಯಲ್ಲಿ (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)

ಬಿ. ಕುಪ್ಪಸಾಮಿನಾಯಡು,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡು ಆಫಿಸಿನಿಂದ.

ಇಸ್ತಿಹಾರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರಸೀಡೆಂಟರವರಲ್ಲಿಗೆ ಕೊಡುವ ಅರ್ಜಿಗಳಿಗೆ ಆಗುವ ಜವಾಬುಗಳನ್ನು ಸುಲಭವಾಗಿ ತಿಳಿದುಕೊಳ್ಳುವ ಬಗ್ಗೆ ಅರ್ಜಿದಾರ್‌ಗಳಿಗೆ ಯಿದರಿಂದ ತಿಳಿಯಪಡಿಸುವದೇನಂದರೆ:—

ಅರ್ಜಿಗಳು ಕೊಟ್ಟಬಳಿಕ 8 ದಿವಸಗಳ ವರಿವಿಗೂ ಜವಾಬ್ ತಲಪದೆ ಯಿದ್ದಲ್ಲಿ ಅರ್ಜಿದಾರ್‌ಗಳು ನಮ್ಮ ಆಫಿಸ್ ಮ್ಯಾನೇಜರರ ರೂಬರೂಬ್ ಹಾಜರಾಗಿ ಜವಾಬ್‌ಗಳನ್ನು ತೆಗದುಕೊಳ್ಳತಕ್ಕದ್ದು. ಒಂದು ವೇಳೆ ಅರ್ಜಿಗಳಿಗೆ ಜವಾಬ್ ಆಗದೆ ಇದ್ದಪಕ್ಷದಲ್ಲಿ ಅರ್ಜಿದಾರ್ರು ಆ ಸಂಗತಿಯನ್ನು ಕೂಡ್ಲೆ ಪ್ರಸೀಡೆಂಟರವರ ಬಳಿ ರೂಬರೂ ಹಾಜರಾಗಿ ತಿಳಿಯಪಡಿಸತಕ್ಕದ್ದು.

ಅರ್ಜಿಗಳು ಫೈಸಲಾದ ತಾರೀಖು ತಿಳಿಸಲು ಒಂದು ಮಿನೋ ತಯಾರ್ಮಾಡಿ ಮ್ಯುನಿಸಿಪಲ್ ಆಫಿಸಿನಲ್ಲಿ ಚಿಕಟ್ಟುಯಿಸಲ್ಪಡುವದು.

ತಾರೀಖು 18ನೇ ಮೇ 1896.

ಟಿ. ಪಿ. ಲೆನಾರ್ಡ್,
ಪ್ರಸಿಡೆಂಟ್.